ಲಂಚದ ಬೇಡಿಕೆ ಈಡೇರಿಸಲಾಗದೇ ಪಿಡಿಓ ದೀರ್ಘಾವಧಿ ರಜೆ ಹಾಕಿ ವರ್ಗಾವಣೆ ಪ್ರಯತ್ನದಲ್ಲಿ ಬಿಸಿಯಾಗಿದ್ದ. ಸುಳ್ಳು ಬಿಲ್ಲುಗಳ ಸುಲಿಗೆಯಲ್ಲಿ ಈಳಗಿ ಪಾಲೂ ಇದ್ದಿದ್ದರಿಂದ ಪಿಡಿಓ ಜೊತೆ ಮಾತನಾಡುವಂತಿರಲಿಲ್ಲ. ಹಾಗಾಗಿ, 'ಈವೊತ್ತೊಂದು ದಿನ ಹೆಂಗಾನ ಅಡ್ಜಸ್ಟ್ ಮಾಡಿಕ್ಯಾ... ನಾಳೆ ಯವಸ್ಥೆ ಮಾಡ್ತೇನೆ' ಅಂತ ಈಳಗಿ ಕೊನೆಗೆ ಕಳಚಿಕೊಂಡ.

ಇಡೀ ದಿನ ಅಲೆದಲೆದು ದಣಿದ ರಾಮಾಂಜಿನಿ ಭಾರ ಹೃದಯದಿಂದ ತನ್ನ ಪರಿವಾರ ಬೀಡುಬಿಟ್ಟಿದ್ದ ಹುಣಸೀಮರದ ಬಳಿ ಬಂದಾಗ ಮುತ್ತಿಕೊಂಡ ಪಿಳಿಪಿಳಿ ಕಣ್ಣುಗಳನ್ನು ಎದುರಿಸಲಾಗಲಿಲ್ಲ. ಆ ಕ್ಷಣಕ್ಕೆ ಅವರು ಹೆಸರಿಗಷ್ಟೇ ಹಗಲು ವೇಷಗಾರರು. ಆ ತಂಡದ ಯಾರ ಮುಖದಲ್ಲೂ ಬಣ್ಣವಿಲ್ಲ, ವೇಷವಿಲ್ಲ, ಸಂಭಾಷಣೆಯಿಲ್ಲ, ಬಿಲ್ಲುಬಾಣಗಳಿಲ್ಲ, ಸಂಗೀತವಿಲ್ಲ, ಗೆಜ್ಜೆಯಿಲ್ಲ, ಕೇಕೆಯಿಲ್ಲ, ಕುಣಿತವಿಲ್ಲ. ಆರ್ಭಟದ ಜಾಗೆಯಲ್ಲಿ ಆರ್ತತೆ ತುಂಬಿದ ಮೌನ.

ಹಾಗೆ ನೋಡಿದರೆ ಅವರ ಹಗಲುವೇಷವೇ ರಾತ್ರಿಯ ಆಹಾರವಾಗಬೇಕಿತ್ತು. ಆದರೆ, ಇಂದು ಹಗಲು ಮುಗಿದು ಹೋದರೂ ಅವರೊಳಗಿನ ರಾಮ, ಲಕ್ಷ್ಮಣ, ಸೀತೆ, ಹನುಮಂತ, ರಾವಣ, ಶೂರ್ಪನಖಿ... ಯಾರೂ ಹೊರಬರಲಿಲ್ಲ. ಆದರೆ, ರಾಮಾಂಜಿನಿಯ ಹೊಟ್ಟೆಯೊಳಗಿನ ಸಿಟ್ಟೋ, ವ್ಯವಸ್ಥೆ ಬಗೆಗಿನ ತಿರಸ್ಕಾರವೋ, ಹಸಿವಿನ ಉತ್ತೇಜನವೋ, ಪರಿವಾರದ ಮಮಕಾರವೋ ದಿಢೀರನೆ ಪ್ರತ್ಯಕ್ಷವಾಗಿ ಆತನ ದಾರಿಗೆ ಬೆಳಕು ಚಿಮುಕಿಸುತ್ತಾ ಮುನ್ನಡೆಸಲು ಮುಂದಾಯಿತು.

ಯಜಮಾನ ನಿರ್ಧಾರ ತೆಗೆದುಕೊಂಡ. ತಂಡ ಹಿಂಬಾಲಿಸಿತು; ಕರಾಳ ರಾತ್ರಿಯಲ್ಲಿ ಹಾಡು–ಕುಣಿತ ಮರೆತು ಗೊತ್ತುಗುರಿಯಿಲ್ಲದೆ ನಡೆಯತೊಡಗಿತು, ನಡೆದೇ ನಡೆಯಿತು. ನಡುರಾತ್ರಿ ತಲುಪಿದ್ದು ಭೈರಪ್ಪನ ಗುಡ್ಡದ ಭುಜ. ಅಲ್ಲಿಗೆ ತಲುಪಿದ್ದೇ ತಡ, ತಂಡದ ಸದಸ್ಯರು ಅದು ಸಾವಿರಾರು ವರ್ಷಗಳಿಂದ ತಮ್ಮ ನೂರಾರು ತಲೆಮಾರಿನ ಹಿರೀಕರು ಬಾಳಿಬದುಕಿದ ಆಪ್ತ ಪ್ರದೇಶವೆಂಬಂತೆ ಹೊಂದಿಕೊಂಡರು. ಅಲ್ಲಿನ ಗಿಡಮರ, ಕಲ್ಲುಬಂಡೆ, ಹುಳುಹುಪ್ಪಡಿ, ಗವಿಗಳು, ಕಂದಕಗಳು ಯಾವುದೂ ಅಪರಿಚಿತವೆನಿಸಲಿಲ್ಲ. ಮಕ್ಕಳಂತೂ ಆ ಸರೋರಾತ್ರಿಯಲ್ಲೂ ನಿಚ್ಚಳವಾಗಿದ್ದು ಲವಲವಿಕೆಯಿಂದ ಓಡಾಡುತ್ತಾ ಲಭ್ಯವಿರುವ ವಸ್ತುಗಳನ್ನೇ ಆಟಿಕೆಗಳನ್ನಾಗಿ ಪರಿವರ್ತಿಸಿಕೊಂಡು ತಮ್ಮ ಲೋಕದಲ್ಲಿ ಕಳೆದುಹೋದರು. ಮಹಿಳೆಯರು ಹಿಂದಿನ ದಿನ ಇದೇ ಜಾಗದಲ್ಲಿ ಅರ್ಧಕ್ಕೆ ಬಿಟ್ಟ ಕೆಲಸಕಾರ್ಯಗಳನ್ನು ಮುಂದುವರಿಸಿದವರಂತೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು.

ನಡೆದ ಆಯಾಸ ಪರಿಹರಿಸಲೋ, ಹೊಟ್ಟೆ ಹಸಿವು ಮರೆಯಲೋ ಎಂಬಂತೆ ಕುಟುಂಬದ ಯಜಮಾನ ಪುಟ್ಟ ಹಾರ್ಮೋನಿಯಂ ಪೆಟ್ಟಿಗೆ ನುಡಿಸಲು ಆರಂಭಿಸಿದ. ಬೇರೆಬೇರೆ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದ ವೇಷವಿಲ್ಲದ ರಾಮಾಯಣದ ಪಾತ್ರಗಳೆಲ್ಲ ಒಂದೊಂದಾಗಿ ರಾಮಾಂಜಿನಿಯ ಸುತ್ತಮುತ್ತ ನೆರೆಯತೊಡಗಿದವು. ಹಗಲು ವೇಷಗಾರರ ರಾತ್ರಿ ನಾಟಕ ಆರಂಭವಾಯಿತು. ಅಲ್ಲಿ ಪ್ರೇಕ್ಷಕರು, ಗರಿಗರಿ ನೋಟು ನೀಡುವವರು, ಜೋಳಿಗೆಗೆ ಕಾಳು ಸುರಿಯುವವರು, ಶಹಬ್ಬಾಸಗಿರಿ ಕೊಡುವವರು ಯಾರೂ ಇರಲಿಲ್ಲ. ಆದಾಗ್ಯೂ ರಾಮಾಂಜಿನಿ ಬಳಗದ ರಾಮಾಯಣ ಒಂದಿನಿತೂ ಕುಂದಿಲ್ಲದೆ ಮುಂದುವರಿಯಿತು. ಅಲ್ಲಿ ಬದುಕು ಮತ್ತು ನಾಟಕ ಎರಡೂ ಸ್ಪರ್ಧೆಗಿಳಿದಂತೆ ಏಕಕಾಲಕ್ಕೆ ರಂಗ ಪ್ರವೇಶಿಸಿ ಪ್ರದರ್ಶನ ಕಂಡುಕೊಂಡವು.

ಅದ್ಯಾವುದೋ ಜಾವ. ಸೀತೆಯನ್ನು ಹುಡುಕಿಕೊಂಡು ಹೊರಟ ಹನುಮಂತ ಸಮುದ್ರ ದಾಟಿ ಶ್ರೀಲಂಕೆಗೆ ಜಿಗಿಯುವ ಪ್ರಸಂಗ. ಬಣ್ಣವಿಲ್ಲ, ಬಾಲವಿಲ್ಲ, ಮೂತಿ ಊದಿಸಿಕೊಂಡಿಲ್ಲ. ಆದರೂ ಹನುಮ ಪಾತ್ರಧಾರಿಯ ಆರ್ಭಟಕ್ಕೆ ಸಾಟಿಯಿಲ್ಲ. ಅವನ ಕುಣಿತಕ್ಕೆ ರಂಗಕೇಂದ್ರದಲ್ಲಿದ್ದ ಶ್ರೀರಾಮ, ಲಕ್ಷ್ಮಣ, ವಾನರ ಸೇನೆಯ ಜೊತೆಗೆ ನೇಪಥ್ಯದಲ್ಲಿದ್ದ ಸೀತೆ, ರಾವಣ ಪಾತ್ರಗಳ ತಾಳ, ಕೇಕೆಗಳೂ ಸೇರಿ ಇಡೀ ವಾತಾವರಣ ಭಾವಾವೇಶದ ಪರಾಕಾಷ್ಠೆ ತಲುಪಿತ್ತು.